ಅಧ್ಯಕ್ಷರು
ನಗರಸಭೆ ವಿಜಾಪೂರ　　　　ನಗರಸಭೆ ವಿಜಾಪೂರ　　　　**ನಗರಸಭೆ ಕಾರ್ಯಾಲಯ**
ವಿಜಾಪೂರ

ಕ್ರ./ನಸವಿ/ಲೋವಿ/ಶೇ.18/2513/08-09　　　　ದಿನಾಂಕ: 13-01-2009

**ತಿದ್ದುಪಡಿ ಟೆಂಡರ ಪ್ರಕಟಣೆ**

ಯಾವತ್ತೂ ವ್ಯಾಪಾರಸ್ಥರಿಗೆ ಸಲಕರಣೆ ಪೂರೈಕೆದಾರರಿಗೆ ತರಬೇತಿ ನೀಡುವ ಅಧಿಕೃತ ಸಂಘಸಂಸ್ಥೆಗಳಿಗೆ ಈ ಮೂಲಕ ತಿಳಿಸುವದೇನೆಂದರೆ, ಈ ಕಾರ್ಯಾಲಯದಿಂದ ದಿ: 27-12-2008 ರಂದು ವಿಜಯಕರ್ನಾಟಕ ಕನ್ನಡ ದಿನಪತ್ರಿಕೆಯಲ್ಲಿ ಅಲ್ಪಾವಧಿ ಟೆಂಡರ್ ಪ್ರಕಟಣೆಯನ್ನು ಕರೆಯಲಾಗಿದ್ದನ್ನು ಮುಂದೂಡಿ ಹಾಗೂ ತಿದ್ದುಪಡಿ ಮಾಡಿ ಈ ಕೆಳಕಂಡ ಸನ್ 2006-07, 2007-08 ಹಾಗೂ 2008-09 ನೇ ಸಾಲಿಗಾಗಿ ಶೇ.18 ರಡಿ ಕಾಯ್ದಿರಿಸಿದ ನಿಧಿಯಲ್ಲಿ ಪ.ಜಾ. & ಪ.ಪಂ. ಜನರ ಶ್ರೇಯೋಭಿವೃದ್ಧಿಗಾಗಿ ಸಲಕ್ಕರಣೆ ಪೂರೈಕೆ ಹಾಗೂ ತರಬೇತಿ ನೀಡಬೇಕಾಗಿರುವದರಿಂದ ಸಲಕರಣೆ ಪೂರೈಸುವ ವ್ಯಾಪಾರಸ್ಥರು ತರಬೇತಿ ನೀಡಲಿಚ್ಛಿಸುವ ಅಧಿಕೃತ ಸಂಘ ಸಂಸ್ಥೆಯವರು ಈ ಕೆಳಕಂಡ ಸೂಚನೆ ಹಾಗೂ ಷರತ್ತುಗಳಿಗೆ ಒಳಪಟ್ಟು ಟೆಂಡರ್ ಸಲ್ಲಿಸಬಹುದಾಗಿದೆ.

**ಸನ್ 2006-07 ನೇ ಸಾಲಿನ ಸಲಕರಣೆ ಪೂರೈಕೆಯ ವಿವರ**

| ಅ. ನಂ | ವಿವರ | ಕಾಯ್ದಿರಿಸಿದ ಮೊತ್ತ (ರೂ. ಲಕ್ಷಗಳಲ್ಲಿ) | ಠೇವಣಿ ಮೊತ್ತ | ಫಾರ್ಮ ಫೀ | ತರಬೇತಿ ಅವಧಿ |
|---|---|---|---|---|---|
| 1. | ಖಾರಾಕುಟ್ಟುವ ಯಂತ್ರ | **1-00** | 2500-00 | **500-00** | - |
| 2. | ಶಾವಿಗೆ ಯಂತ್ರ | **1-00** | 2500-00 | **500-00** | - |
| 3. | ಚರ್ಮದ ಹೊಲಿಗೆ ಯಂತ್ರ | **2-00** | 4500-00 | **500-00** | - |
| 4. | ಹೊಲಿಗೆ ಯಂತ್ರ (2006-07 & 2008-09) | **2-00**<br>**1-00** | 7500-00 | **500-00** | - |
| 5. | ತಗಡಿನ ಪತ್ರೆ (ಸೈಜ್ - 6 x 2.5) | **5-00** | 12500-00 | **500-00** | - |
| | **ಸನ್ 2007-08 ನೇ ಸಾಲಿನ ಸಲಕರಣೆ ಪೂರೈಕೆಯ ವಿವರ** | | | | |
| 6. | ವಿಜಾಪೂರ ಸರಕಾರಿ ಬಾಲಕರ ಪದವಿ ಪೂರ್ವ ಕಾಲೇಜಿಗೆ ಸುಮಾರು 200 ಡೆಸ್ಕ್ ಪೂರೈಕೆ (3x0.5x1.5x2) | **2-00** | 4500-00 | **500-00** | - |
| | **ಸನ್ 2007-08 ಹಾಗೂ 2008-09 ನೇ ಸಾಲಿಗೆ ಸಂಘ/ಸಂಸ್ಥೆಯವರು ತರಬೇತಿ ನೀಡುವ ವಿವರ** | | | | |
| 7. | ಟೇಲರಿಂಗ್ ತರಬೇತಿ (2007-08 & 2008-09) | **1-50**<br>**2-00** | 7750-00 | **500-00** | **45 ದಿನ** |
| 8. | ಲಘು & ಭಾರಿ ವಾಹನ ತರಬೇತಿ 2008-09 | **7-00** | 16500-00 | **500-00** | **45 ದಿನ** |
| 9. | ಕಂಪ್ಯೂಟರ್ ತರಬೇತಿ 2008-09 | **4-00** | 10000-00 | **500-00** | **45 ದಿನ** |
| 10. | ಫ್ಯಾಶನ್ ಡಿಸೈನ್ ತರಬೇತಿ (2007-08 & 2008-09) | **1-50**<br>**1-00** | 6250-00 | **500-00** | **45 ದಿನ** |
| 11. | ಮೋಟರ್ ರಿವೈಂಡಿಂಗ್ ತರಬೇತಿ 2007-08 | **1-00** | 2500-00 | **500-00** | **45 ದಿನ** |
| 12. | ಸ್ಕ್ರೀನ್ ಪ್ರಿಂಟಿಂಗ್ ತರಬೇತಿ 2007-08 | **1-00** | 2500-00 | **500-00** | **45 ದಿನ** |
| 13. | ಲಂಭಾಣಿ ಉಡುಪುಗಳ ಕಸೂತಿ ತರಬೇತಿ (2007-08 & 2008-09) | **1-00**<br>**1-50** | 6250-00 | **500-00** | **45 ದಿನ** |

-:ಸೂಚನೆಗಳು:-

1. ಖಾಲಿ ಟೆಂಡರ ಫಾರ್ಮಗಳಿಗಾಗಿ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ : 30-01-2009 ಸಂಜೆ 5-00 ಗಂಟೆಯವರೆಗೆ
2. ಖಾಲಿ ಟೆಂಡರ ಫಾರ್ಮಗಳನ್ನು ದಿನಾಂಕ: 02-02-2009 ರ ಸಂಜೆ 5-00 ಘಂಟೆಯವರೆಗೆ ಪೂರೈಸಲಾಗುವದು.
3. ಭರ್ತಿ ಮಾಡಿದ ಟೆಂಡರ ಫಾರ್ಮಗಳು ಸಲ್ಲಿಸುವ ದಿನಾಂಕ: 03-02-2009 ಸಂಜೆ 4-30 ಘಂಟೆಯವರೆಗೆ
4. ದಿನಾಂಕ: 03-02-2009 ರಂದು ಸಂಜೆ 5-00 ಘಂಟೆಗೆ ನಗರಸಭೆಯ ಸಭಾಭವನದಲ್ಲಿ ಹಾಜರಿರುವ ಬಿಡ್ಡುದಾರರ ಸಮಕ್ಷಮದಲ್ಲಿ ಸ್ವೀಕೃತವಾಗಿರುವ ಟೆಂಡರಗಳನ್ನು ಹಾಗೂ ದರವಾರುಗಳನ್ನು ತೆರೆಯಲಾಗುವದು.
5. ಸೂಚಿಸಿದ ದಿನಾಂಕಗಳಂದು ರಜೆ ಘೋಷಿಸಲ್ಪಟ್ಟರೆ ಮುಂದಿನ ಕೆಲಸದ ದಿನ ಅಂತ ಪರಿಗಣಿಸುವದು.

**-:ಷರತ್ತುಗಳು:-**

1. ಪೂರೈಕೆದಾರರು ಆಯ್.ಎಸ್.ಆಯ್. ಮಾರ್ಕ ಹೊಂದಿದ ಸಲಕರಣೆ & ಯಂತ್ರಗಳನ್ನು ಪೂರೈಸತಕ್ಕದ್ದು .
2. ತಗಡು ಪೂರೈಸುವ ಅಧಿಕೃತ ಗೇಜನ್ನು ನಮೂದಿಸತಕ್ಕದ್ದು.

3. ತರಬೇತಿ ನೀಡುವ ಸಂಘ/ಸಂಸ್ಥೆಗಳು ಅಧಿಕೃತವಾಗಿ ಸರಕಾರದಿಂದ ಮಾನ್ಯತೆ ಪಡೆದಿರಬೇಕು. ಹಾಗೂ ವಿಜಾಪೂರ ನಗರದಲ್ಲಿ ಕನಿಷ್ಠ 2 ವರ್ಷಗಳವರೆಗೆ ಇಂತಹ ತರಬೇತಿ ನೀಡಿದ್ದರ ಅನುಭವದ ಬಗ್ಗೆ ಪ್ರಮಾಣ ಪತ್ರ ಹಾಗೂ ದಾಖಲಾತಿಗಳನ್ನು ಟೆಂಡರ್ ಜೊತೆ ಲಗತ್ತಿಸಬೇಕು.
4. ಪ್ರತಿಯೊಂದು ಸಲಕರಣೆಗಳು, ಯಂತ್ರಗಳು ಹಾಗೂ ತರಬೇತಿಗಳಿಗೆ ಪ್ರತ್ಯೇಕವಾಗಿ ಟೆಂಡರ್ ಹಾಗೂ ಡಿ.ಡಿ. ಸಲ್ಲಿಸತಕ್ಕದ್ದು.
5. ಪ್ರತಿಯೊಂದು ಟೆಂಡರ್‌ಗಳಿಗೆ ತಾಂತ್ರಿಕ ಹಾಗೂ ಆರ್ಥಿಕ ಲಕೋಟೆಗಳನ್ನು ಪ್ರತ್ಯೇಕವಾಗಿ ಸಲ್ಲಿಸತಕ್ಕದ್ದು.
6. ಸಲಕರಣೆಗಳನ್ನು ತಮ್ಮ ಸ್ವಂತ ಖರ್ಚಿನಿಂದ ಸೂಚಿಸಿದ ಸ್ಥಳಕ್ಕೆ ಪೂರೈಸಬೇಕು.
7. ಟೆಂಡರ್‌ಗಳನ್ನು ಅಂಗೀಕರಿಸುವ ಹಾಗೂ ನಿರಾಕರಿಸುವ ಅಧಿಕಾರವನ್ನು ನಗರಸಭೆಯು ಕಾಯ್ದಿರಿಸಿಕೊಂಡಿದೆ.
8. ಹೆಚ್ಚಿನ ವಿವರಗಳಿಗಾಗಿ ಟೆಂಡರ್ ಪುಸ್ತಕ ಓದಿಕೊಳ್ಳುವದು ಹಾಗೂ ಕಛೇರಿ ಅವಧಿಯಲ್ಲಿ ಶೇ.18ರ ವಿಷಯ ನಿರ್ವಾಹಕರನ್ನು ಸಂಪರ್ಕಿಸಬಹುದಾಗಿದೆ.

| | | |
|---|---|---|
| ಸಹಿ/- | ಸಹಿ/- | ಸಹಿ/- |
| **(ಶ್ರೀ.ಕೆ.ಕೆ.ಜಾಲಿಬೇರಿ)ಬಿ.ಇ.** | **(ಶ್ರೀ.ಎಂ.ಮಹೇಂದ್ರಕುಮಾರ) ಕೆ.ಎಂ.ಎ.ಎಸ್.** | **(ಶ್ರೀಮತಿ.ಚಾಂದೂಬಾಯಿ.ಚವ್ಹಾಣ)** |
| **ಸ.ಕಾ.ಅಭಿಯಂತರರು** | **ಪೌರಾಯುಕ್ತರು** | **ನಗರಸಭೆ ವಿಜಾಪೂರ** |